**CW : 2**

PW : 2

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

ಸಾಕ್ಷಿದಾರರ ಹೆಸರು : ಶ್ರೀಮತಿ ಜಯಂತಿ

ಗಂಡನ ಹೆಸರು : ಗಂಗಾದರಪ್ಪ

ಪ್ರಾಯ : 45 ವರ್ಷ

ಉದ್ಯೋಗ ಗೃಹಿಣಿ

ವಾಸಸ್ಥಳ : ಮಾಡ್ನೂರು ಗ್ರಾಮ

ದಿನಾಂಕ:**17.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ದಿ.5-4-25 ರಂದು ನಾನು ಕೌಡಿಚ್ಚಾರಿಗೆ ಹೋಗುವಾಗ ಅಲ್ಲಿ ಜನರು ಸೇರಿದ್ದರು. ವಾಹನಗಳೆಲ್ಲಾ ನಿಂತಿತ್ತು. ನಾನು ಅಲ್ಲಿ ಏನಾಗಿದೆ ಎಂದು ಹೋಗಿ ನೋಡಿದಾಗ ಸುಳ್ಯ ಕಡೆಗೆ ಹೋಗುವಾಗ ರಸ್ತೆ ಬದಿಯಲ್ಲೆ ಒಬ್ಬರು ಬಿದ್ದಿದ್ದರು. ನಾವು ಅವರನ್ನು ಎಬ್ಬಿಸಿ ಉಪಚರಿಸಿದೆವು. ಅವರಿಗೆ ವಾಹನ ತಾಗಿ ಅಪಘಾತವಾಗಿತ್ತು ಎಂದು ಗೊತ್ತಾಯಿತು. ನಾನು ಅಪಘಾತವನ್ನು ಪ್ರತ್ಯಕ್ಷ ನೋಡಿಲ್ಲ. ಅಪಘಾತ ಸಂಜೆ 7.30 ರೊಳಗೆ ಆಗಿತ್ತು. ಬಿದ್ದ ವ್ಯಕ್ತಿ ನನ್ನ ಪರಿಚಯದ ಇಬ್ರಾಹಿಂ ಆಗಿದ್ದರು. ನಂತರ ನಾನು ಇಬ್ರಾಹಿಂ ಅಣ್ಣನ ಮಗ ಕಬೀರ್ ರವರಿಗೆ ಫೋನ್ ಮಾಡಿ ತಿಳಿಸಿ ಅಲ್ಲಿಂದ ಹೋದೆನು. ನಾನು ನೋಡಿದಾಗ ಇಬ್ರಾಹಿಂ ತಲೆಗೆ ಮತ್ತು ಅವರ ಹಿಂಬದಿಗೆ ಪೆಟ್ಟಾಗಿತ್ತು. ನಾನು ಸರಿಯಾಗಿ ನೋಡಿರಲಿಲ್ಲ. ಇಬ್ರಾಹಿಂರವರನ್ನು ಸ್ಥಳದಿಂದ ಮಹಾವೀರ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಗೊತ್ತಾಯಿತು. ನಂತರ ಅವರಿಗೆ ಎಲ್ಲಿ ಚಿಕಿತ್ಸೆ ಕೊಡಿಸಲಾಯಿತು ಎಂದು ಗೊತ್ತಿಲ್ಲ. ಇಬ್ರಾಹಿಂಗೆ ಚಿಕಿತ್ಸೆ ಫಲಕಾರಿಯಾಗಲಿಲ್ಲ ಎಂದು ಮನೆಗೆ ವೈದ್ಯರು ಕಳುಹಿಸಿದ ವಿಚಾರ ಗೊತ್ತಾಯಿತು. ಇಬ್ರಾಹಿಂನನ್ನು ಮನೆಗೆ ಕರೆದುಕೊಂಡು ಬಂದ ನಂತರ ಆತ ಮರಣ ಹೊಂದಿದ ವಿಚಾರ ಗೊತ್ತಾಯಿತು. ಅಪಘಾತ ಯಾವ ವಾಹನದಿಂದ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ.

ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ. ನಿಪಿ-5 ರಲ್ಲಿ ಕಾಣುವ ವಾಹನವನ್ನು ನಾನು ಈ ಮೊದಲು ಎಲ್ಲಿಯು ನೋಡಿಲ್ಲ. ಪೊಲೀಸರು ನನ್ನನ್ನು ಒಂದು ಬಾರಿ ಅಪಘಾತ ಸಂಬಂಧಿತವಾಗಿ ವಿಚಾರಣೆ ಮಾಡಿದ್ದಾರೆ.

CW : 2

PW : 2

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ದಿ.5-3-25 ರಂದು ಮದ್ಲ ಎಂಬಲ್ಲಿ ನಡೆಯುವ ಒತ್ತೆಕೋಲದಲ್ಲಿ ದೈವಕ್ಕೆ ಹೂವು ನೀಡಲು ಕೌಡಿಚ್ಚಾರಿನಿಂದ ಹೂವು ತರಲು ಸಂಜೆ ಕೌಡಿಚ್ಚಾರಿಗೆ ಬರಲು ಮಾಣಿ-ಮೈಸೂರು ರಾ. ಹೆದ್ದಾರಿಯ ಮಾಡ್ನೂರು ಗ್ರಾಮದ ಮದ್ಲ ಬಸ್ ನಿಲ್ದಾಣದಲ್ಲಿ ವಾಹನಕ್ಕಾಗಿ ಕಾಯುತ್ತಿದ್ದೆನು ಎಂದರೆ ಸರಿಯಲ್ಲ. ಆ ಸಮಯ ಮಳೆ ಬರುತ್ತಿದ್ದು ಸಂಜೆ 7.30 ರ ಸಮಯದಲ್ಲಿ ಮೃತ ಇಬ್ರಾಹಿಂ ರಸ್ತೆ ಬದಿಯಲ್ಲಿ ಕೊಡೆ ಹಿಡಿದುಕೊಂಡು ನಡೆದುಕೊಂಡು ಬುರತ್ತಿದ್ದು ಅವರು ಪ್ರತಿದಿನ ಗಣಪತಿ ಭಟ್ ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗಿ ಬರುತ್ತಿರುವುದು ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಪುತ್ತೂರು ಕಡೆಯಿಂದ ಸುಳ್ಯ ಕಡೆಗೆ ಕೆಎ-21-ಇಇ-2600 ನೊಂದಣಿ ಸಂ ಯ ಸ್ಕೂಟರನ್ನು ಆರೋಪಿ ಆತನ ಪತ್ನಿ ಅಶ್ವಿನಿ ಎನ್ನುವವರನ್ನು ಕೂರಿಸಿಕೊಂಡು ಅಜಾಗರೂಕತೆ ಮತ್ತು ದುಡುಕುತನದಿಂದ ಸವಾರಿ ಮಾಡಿಕೊಂಡು ಬಂದು ರಸ್ತೆಯ ಎಡಬದಿ ಅಂದರೆ ಸುಳ್ಯ ಕಡೆಗೆ ಹೋಗುವ ಮಣ್ಣು ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಇಬ್ರಾಹಿಂರವರಿಗ ಹಿಂದಿನಿಂದ ಡಿಕ್ಕಿಪಡಿಸಿದ್ದು ಅದರ ಪರಿಣಾಮ ಇಬ್ರಾಹಿಂರವರು, ಆರೋಪಿ ಹಾಗೂ ಅತನ ಹೆಂಡತಿ ರಸ್ತೆಗೆ ಬಿದ್ದು ಗಾಯವುಂಟಾಗಿತ್ತು ಎಂದರೆ ಸರಿಯಲ್ಲ, ನಾನು ಕೂಡಲೇ ಅಲ್ಲಿಗೆ ಹೋಗಿ ಇಬ್ರಾಹಿಂ ಅವರನ್ನು ನೋಡಿದ್ದು ಅವರ ಹಣೆಯ ಭಾಗಕ್ಕೆ ರಕ್ತಗಾಯವಾಗಿ ಅವರು ಸರಿಯಾಗಿ ಕುಳಿತುಕೊಳ್ಳಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ವಿಚಾರವನ್ನು ನಾನು ಇಬ್ರಾಹಿಂ ರವರ ಅಣ್ಣನ ಮಗ ಮಹಮದ್ ಕಬೀರ್ ರವಗೆ ಫೋನ್ ಮಾಡಿ ತಿಳಿಸಿದೆಐನು ಎಂದರೆ ಸರಿ. ಅಪಘಾತ ಆರೋಪಿಯ ದುಡುಕುತನ ಮತ್ತು ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಹಾಗೂ ವರುಹೇಳಿಕೆಯನ್ನು ನೀಡಿದೆದನು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಮತ್ತು ಮರುಹೇಳಿಕೆಯನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು.

ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**CW : 2**

PW : 2

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.